SRI SUDHEENDRA RAO KASABE (Minister of State for Marketing and Muzarai).—

(*a*) So far 69 acres and 26 guntas of land has been acquired as per Land Acquisition Act.

(*b*) Reserved for new market yard.

(*c*) Action has been taken to prepare plan for 69 acres and 26 guntas of land only.

(*d*) At present, it has been proposed to undertake developmental works of Rs. 5 lakhs:

Announcement

MR. SPEAKER.—I have received the following message from the Chairman, Legislative Council,

> "As required by Rule 106 of the Rules of Business and Conduct in Karnataka Legislative Council, I am sending herewith the Karnataka State Civil Services (Regulation of Promotion, Pay and Pension) (Amendment) Bill, 1982, which has been agreed to by the Legislative Council on the 22nd June 1982 without amendments."

Calling Attention To a Matter of urgent public Importance.

Re: Lathi Charge by Police on workers of wire on Metal Industries Yeswanthapur

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೭–೬–೧೯೮೨ ರಂದು ಮೈಸೂರು ವೈರ್ ಮತ್ತು ಮೆಟಲ್ ಇಂಡಿಸ್ಟ್ರೀಸ್ ಕಾರ್ಮಿಕರು ಶಾಂತಿಯುತವಾಗಿ ಮೆರವಣಿಗೆ ಹೋಗುತ್ತಿದ್ದ ಸಮಯದಲ್ಲಿ ಪೋಲೀಸಿನವರು ಲಾಠಿ ಚಾರ್ಜ್ ಮಾಡಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಗುಂಡುರಾವ್ (ಮುಖ್ಯ ಮಂತ್ರಿಯವರು).—

೧. ಆಡಳಿತ ವರ್ಗದವರೊಡನೆ ದುರ್ನಡತೆ ಮತ್ತು ದುರ್ವರ್ತನೆಯಿಂದ ವರ್ತಿಸಿದ್ದಕ್ಕಾಗಿ ಮೈಸೂರ್ ವೈರ್ ಅಂಡ್ ಮೆಟಲ್ ಇಂಡಸ್ಟ್ರಿ ಸಂಸ್ಥೆಯ ಹದಿನೇಳು ಕಾರ್ಮಿಕರ ವಿರುದ್ಧ ಹೊರಡಿಸಿದ ಸಸ್ಪೆಷನ್ ಆದೇಶವನ್ನು ಹಾಗೂ ಮೂವರನ್ನು ಕೆಲಸದಿಂದ ತೆಗೆದು ಹಾಕಿ ಹೊರಡಿಸಿದ ಆದೇಶವನ್ನು ಆಡಳಿತ ವರ್ಗದವರು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಮಾಡಿ ಆ ಕಾರ್ಖಾನೆಯ ಕಾರ್ಮಿಕರು ೨೩–೩–೧೯೮೨ ರಿಂದ ಕೆಲಸ ಮಾಡದೆ ಮುಷ್ಕರ ಹೂಡಿದ್ದಾರೆಂದು ವರದಿಯಾಗಿದೆ.

೨. ಮುಷ್ಕರ ಹೂಡಿದ್ದ ಕಾರ್ಮಿಕರು ೧೫–೬–೧೯೮೨ ರಂದು ಒಬ್ಬ ನಿಷ್ಠಾವಂತ ಕಾರ್ಮಿಕನನ್ನು ತಡೆದು ಅವನ ಮೇಲೆ ಹಲ್ಲೆ ಮಾಡಿದರೆಂದು ತಿಳಿದು ಬಂದಿದೆ. ಈ ಬಗ್ಗೆ ದೂರು ಬಂದ ಮೇಲೆ ಭಾರತ ದಂಡ ಸಂಹಿತೆಯ ೧೪೩, ೧೪೪, ೧೪೭ ಮತ್ತು ೩೨೪ನೇ ಪ್ರಕರಣಗಳ ಮೇರೆಗೆ ಪೋಲೀಸರು ಮೊಕದ್ದಮೆಯನ್ನು ದಾಖಲು ಮಾಡಿಕೊಂಡರು. ನಾಲ್ವರನ್ನು ದಸ್ತಗಿರಿ ಮಾಡಲಾಯಿತು. ಅನಂತರ ೧೭–೬–೧೯೮೨ ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

೩. ಪೋಲೀಸರ ಈ ಕ್ರಮವನ್ನು ಪ್ರತಿಭಟಿಸಿ, ಮೈಸೂರ್ ವೈರ್ ಅಂಡ್ ಮೆಟಲ್ ಇಂಡಸ್ಟ್ರೀಸ್, ಟಾಟಾ ಪಿನ್ಸ್, ವಿಡಿಯಾ (ಇಂಡಿಯಾ) ಲಿಮಿಟೆಡ್, ದೀಪಕ್ ಇನ್ಸುಲೇಟರ್ ಕೇಬಲ್

ಮತ್ತು ಇತರ ಕಾರ್ಖಾನೆಗಳ ಸಂಪಾರು ೨೦೦೦ ಕಾರ್ಮಿಕರು ೧೭-೬-೧೯೮೨ ರಂದು ತಮ್ಮ ತಮ್ಮ ಕಾರ್ಖಾನೆಗಳಿಂದ ಯಶವಂತಪುರದ ಪೋಲೀಸು ಠಾಣೆಗೆ ಮೆರವಣಿಗೆ ಹೊರಟರು. ಈ ಗುಂಪು ಬಿ ಟಿ ಎಸ್ ಬಸ್ಸಿನ ಮೇಲೆ, ಪೋಲೀಸ್ ವ್ಯಾನಿನ ಮೇಲೆ ಹಾಗೂ ಪೋಲೀಸರ ಮೇಲೆ ಕಲ್ಲು ತೂರಿತು. ಪ್ರದರ್ಶನಕಾರರು ಹಿಂಸಾತ್ಮಕತ್ಯಕ್ಕೆ ಇಳಿದು ಸಿಕ್ಕಾಪಟ್ಟೆ ಕಲ್ಲು ತೂರಾಡಿ ವಾಹನ ಸಂಚಾರಕ್ಕೆ ಧಕ್ಕೆಯುಂಟು ಮಾಡಿದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಪೋಲೀಸರು ಅಶ್ರುವಾಯು ಷೆಲ್ಲುಗಳನ್ನು ಸಿಡಿಸ ಬೇಕಾಯಿತು, ಅಲ್ಲದೆ ಲಘು ಲಾಠಿ ಪ್ರಯೋಗ ಮಾಡಬೇಕಾಯಿತು. ಗಾಯಗೊಂಡ ಎಲ್ಲರಿಗೂ ವೈದ್ಯಕೀಯ ಚಿಕಿತ್ಸೆ ನೀಡಲಾಯಿತು. ಕಲ್ಲು ತೂರಿದ ಪ್ರಯುಕ್ತ ಹದಿನಾಲ್ಕು ಜನ ಗಾಯಗೊಂಡರು ಹಾಗೂ ಒಬ್ಬರು ಅಸಿಸ್ಟೆಂಟ್ ಪೋಲೀಸ್ ಕಮೀಷನರ್ ಒಬ್ಬರು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಮೂವರು ಸಬ್ ಇನ್ಸ್‌ಪೆಕ್ಟರ್ ಹಾಗೂ ಹದಿನೇಳು ಪೋಲೀಸರು ಗಾಯಗೊಂಡರು. ಇದಕ್ಕೆ ಸಂಬಂಧ ಪಟ್ಟಂತೆ, ಎರಡು ಮೊಕದ್ದಮೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಇಪ್ಪತ್ತನಾಲ್ಕು ಜನರನ್ನು ದಸ್ತಗಿರಿ ಮಾಡಲಾಗಿದೆ. ಈ ಮೊಕದ್ದಮೆಗಳ ಬಗ್ಗೆ ತನಿಖೆ ನಡೆಯುತ್ತಿದೆ. ಈ ಪ್ರದೇಶದಲ್ಲಿ ಪೋಲೀಸ್ ಕಾವಲಿನ ವ್ಯವಸ್ಥೆ ಮಾಡಲಾಗಿದೆ. ಪರಿಸ್ಥಿತಿ ಈಗ ಶಾಂತವಾಗಿದೆ.

ವಿ.ಹಿ.ಪಿ.ಎಂ.

ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಂಥ ಹೇಳಿಕೆ ಪ್ರಕಾರ ೨೩-೩-೧೯೮೨ರಂದು ಆ ಕೆಲಸಗಾರರು ಮುಷ್ಕರ ಹೂಡಿದರು. ಅದಕ್ಕೆ ಕಾರಣವನ್ನು ತಿಳಿಸಿದ್ದಾರೆ. ವಿನಾಕಾರಣ ಮೂರು ಜನ ಕೆಲಸಗಾರರನ್ನು ಕೆಲಸದಿಂದ ಇಳಿಸಿದ್ದರಿಂದ, ಆ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಎರಡು ಮೂರು ದಿವಸವಾದ ಮಾಡಿದರೂ ಕೊನೆಗೆ ಬೇರೆ ಮಾರ್ಗ ಇಲ್ಲದೆ ಮುಷ್ಕರ ಹೂಡಿದರು. ಅಕ್ರಮವಾಗಿ ಕೆಲಸದಿಂದ ತೆಗೆದುದ್ದನ್ನು ಪ್ರತಿಭಟಿಸಲು ಕೆಲಸಗಾರರು ಕೆಲಸಕ್ಕೆ ಹೋಗಲಿಲ್ಲ, ಆ ಕೆಲಸಗಾರರು ಕೆಲಸಕ್ಕೆ ಹೋಗದ ತಪ್ಪಿಗೆ ೪ ಜನರನ್ನು ಯಶವಂತಪುರ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಬೂಟು ಕಾಲಿನಲ್ಲಿ ಒದ್ದು ಚಿತ್ರ ಹಿಂಸೆ ಕೊಟ್ಟಿದ್ದಾರೆ. ಅವರ ವಿಚಾರಣೆಯನ್ನು ಹಿಡಿದು ಕಿತ್ತಿದ್ದಾರೆ. ಅವರಿಗೆ ಏನೇನು ಚಿತ್ರ ಹಿಂಸೆ ಕೊಡಬೇಕೋ ಅದೆಲ್ಲಾ ಕೊಟ್ಟಿದ್ದಾರೆ. ಕಾಯಿದೆಯನ್ನು ಪರಿಪಾಲನೆ ಮಾಡತಕ್ಕವರು ಕಾಯಿದೆಯನ್ನು ಉಲ್ಲಂಘನೆ ಮಾಡಿದ್ದಾರೆ. ಅವರನ್ನು ಹೊಡೆದಿರುವುದೇ ಅಲ್ಲ. ಅವರನ್ನು ಮೂರು ದಿವಸಗಳ ಕಾಲ ಪೋಲೀಸ್ ಠಾಣೆಯಲ್ಲಿಟ್ಟುಕೊಂಡಿದ್ದಾರೆ ಪೋಲೀಸ್ ಇಲಾಖೆ ಕಾನೂನು ಪ್ರಕಾರ ೨೪ ಗಂಟೆಗಿಂತಲೂ ಹೆಚ್ಚು ಕಾಲ ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲದಿದ್ದರೂ ಅವರನ್ನು ದಸ್ತಗಿರಿ ಮಾಡಿ ಮೂರು ದಿವಸಗಳ ಕಾಲ ಅವರನ್ನು ಇಟ್ಟುಕೊಂಡು ಹಿಂಸೆ ಕೊಟ್ಟಿದ್ದಾರೆ, ಇದನ್ನು ಪ್ರತಿಭಟನೆ ಮಾಡಲಿಕ್ಕೆ ಅಲ್ಲಿರತಕ್ಕ ಕಾರ್ಮಿಕರು ಅನೇಕ ಕೈಗಾರಿಕಾ ಕಾರ್ಮಿಕರು ಒಟ್ಟಾರೆ ಸೇರಿ ಪೋಲೀಸರು ಮಾಡಿರತಕ್ಕ ದೌರ್ಜನ್ಯವನ್ನು ಪ್ರತಿಭಟಿಸಲಿಕ್ಕೆ ಮೆರವಣಿಗೆ ಬಂದರು, ಪ್ರಜಾಪ್ರಭುತ್ವದಲ್ಲಿ ಮೆರವಣಿಗೆ ಮಾಡತಕ್ಕದ್ದು ಪ್ರತಿಭಟಿಸತಕ್ಕದ್ದು ಸ್ವಾಭಾವಿಕ ಆ ಹಕ್ಕು ಅವರಿಗೆ ಇದೆ, ಅದನ್ನು ತಡೆಯಲಿಕ್ಕೆ ಪೋಲೀಸರಿಗೆ ಯಾವ ರೀತಿಯ ಹಕ್ಕು ಇಲ್ಲ, ಸೆಕ್ಷನ್ ೧೪೪ ಅಥವಾ ಇನ್ನು ಬೇರೆ ಯಾವುದಾದರೂ ಸೆಕ್ಷನ್ ಹಾಕಿದ್ದರೆ,ಅವರು ಕೇಳಬಹುದಿತ್ತು. ಅಲ್ಲಿ ಯಾವುದೇ ಸೆಕ್ಷನ್ ಹಾಕಿದ್ದೆ ಪೋಲೀಸರು ಅವರನ್ನು ತಡೆಯುವ ಉದ್ದೇಶ ಏನಿತ್ತು? ಅವರಲ್ಲಿ ಪ್ರತಿಭಟನೆ ಮಾಡಬೇಕು, ಮೆರವಣಿಗೆ ಮಾಡಬೇಕೆಂಬ ಉದ್ದೇಶವಿತ್ತೇ ಹೊರತು ಪೋಲೀಸರ ಮೇಲೆ ಅಥವಾ ಬಸ್ಸುಗಳ ಮೇಲೆ ಕಲ್ಲು ತೂರಾಟ ಮಾಡುವ ಉದ್ದೇಶವಿರಲಿಲ್ಲ, ನಾವು ಮೆರವಣಿಗೆ ಹೋಗುತ್ತೇವೆ, ಇಲ್ಲಿ ಯಾವುದೇ ಸೆಕ್ಷನ್ ಹಾಕಿಲ್ಲ ಆದ್ದರಿಂದ ನೀವು ನಮ್ಮನ್ನು ತಡೆಯಲಿಕ್ಕೆ ಆಗುವುದಿಲ್ಲ, ನಾವು ಶಾಂತಿಯುತವಾಗಿ ಮೆರವಣಿಗೆ ಹೋಗುತ್ತೇವೆ ಎಂದು ಕೇಳಿ ಕೊಂಡರೂ ಸಹ ಅಲ್ಲಿರತಕ್ಕ ಪೋಲೀಸ್ ಅಧಿಕಾರಿಗಳು ಒಪ್ಪಲಿಲ್ಲ, ಇಲ್ಲಿ ಮೆರವಣಿಗೆ ಹೋಗಲಿಕ್ಕೆ ಬಿಡುವುದಿಲ್ಲ ಎಂದು ಹೇಳಿದರು. ನಾವು ಹೋಗುತ್ತೇವೆ ಅಂಥ ಅವರು ಹೇಳಿದರು ಈ ರೀತಿ ಹೇಳುವಾಗ ಅವರವರಿಗೆ ಸ್ವಲ್ಪ ಘರ್ಷಣೆಯಾಯಿತು. ಅಷ್ಟು ಆದ ತಕ್ಷಣ ಲಾಠಿಚಾರ್ಜ್ ಆಗಿದೆ. ಆ ಮೆರವಣಿಗೆ ಯಲ್ಲಿ ಗಂಡುಮಕ್ಕಳು, ಹೆಣ್ಣುಮಕ್ಕಳು ಇದ್ದರೂ ಪೋಲೀಸರು ಯಾರನ್ನೂ ನೋಡಲಿಲ್ಲ, ಹೆಣ್ಣು ಮಕ್ಕಳ ಸೀರೆಯನ್ನು ಬಿಚ್ಚಿ ಹೊಡೆದಿದ್ದಾರೆಂದು ೧೮ನೇ ತಾರೀಖು 'ಕನ್ನಡ ಪ್ರಭ'' ಪತ್ರಿಕೆಯಲ್ಲಿ ಬಂದಿದೆ. ಲಕ್ಷಾಂತರ ಜನ ಮೆರವಣಿಗೆ ಆಗುವಂಥ ಸಂದರ್ಭದಲ್ಲಿ ಗಲಾಟೆಗಳು ಆಗಿಲ್ಲ, ಅಲ್ಲಿ ಸಂಘಟಿತ ಕಾರ್ಮಿಕರು ಮೆರವಣಿಗೆ ಹೊರಟಿರುವಾಗ ಪೋಲೀಸ್ ಅಧಿಕಾರಿಗಳು ನಡೆದುಕೊಂಡ ವರ್ತನೆಯಿಂದ ಗಲಾಟೆಯಾಗಿದೆ. ಅದೇ ಅಸಂಘಟಿತ ಕಾರ್ಮಿಕರು ಆಗಿದ್ದರೆ ಅವರು ಯಾವ ದಿಕ್ಕಿನಲ್ಲಿ ಹೋಗುತ್ತಿ

ದ್ದರು ಎಂದು ಹೇಳಲಿಕ್ಕೆ ಹೋಗುವುದಿಲ್ಲ, ಸಂಘಟಿತ ಕಾರ್ಮಿಕರು ಮೆರವಣಿಗೆ ಹೋಗುವುದನ್ನು ಪೋಲೀಸ್ ಅಧಿಕಾರಿಗಳು ಅಡ್ಡಿಪಡಿಸಲಿಕ್ಕೆ ಕಾರಣ ಏನು? ನಾಲ್ಕು ಜನ ಕಾರ್ಮಿಕರಿಗೆ ಹಿಂಸೆ ಮಾಡಿರುವುದನ್ನು ಪ್ರತಿಭಟನೆ ಮಾಡಲಿಕ್ಕೆ ಮೆರವಣಿಗೆ ಮಾಡಿದರು. ಅಲ್ಲಿ ಹೆಣ್ಣು ಮಕ್ಕಳಿಗೆ ಹೊಡೆದಿದ್ದಾರೆ. ಅನೇಕ ಜನರಿಗೆ ಗಾಯಗಳಾಗಿದೆ, ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಮಾಡಿದ್ದಾರೆ ಅವೆಲ್ಲಾ ಮಾಡುವುದರ ಜೊತೆಯಲ್ಲಿ ಬಾಬುಮಾಥ್ಯು ಅವರನ್ನು ವ್ಯಾನ್‌ನಲ್ಲಿ ಹಾಕಿಕೊಂಡು ಹೋಗಿದ್ದಾರೆ. ನಾಲ್ಕು ಜನ ಪೋಲೀಸರು ಅವರನ್ನು ಹೊಡೆದಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಮುಂದೆ ಅವರನ್ನು ಕರೆದುಕೊಂಡು ಬಂದು ತೋರಿಸುತ್ತೇನೆ, ಅವರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಅವರೇ ನೋಡಲಿ, ನಾವು ಕೂಡ ಪೋಲೀಸ್ ಸ್ಟೇಷನ್‌ಗೆ ಹೋಗಿದ್ದೆವು. ಅವರಿಗೆ ಔಷಧಿ ಹಾಕಿಸಿಕೊಂಡು ಬಂದಿದ್ದರು, ಅವರ ಎಡಗಡೆ ಬೆನ್ನು ಊದುಕೊಂಡಿದೆ. ಅವರನ್ನು ಯಾರೇ ನೋಡಿದರೂ ಅವರಿಗೆ ಹೊಡೆದಂಥವರಿಗೆ ತಕ್ಷಣ ಶಿಕ್ಷೆ ಕೊಡಬೇಕೆಂಬ ಭಾವನೆ ಬರುತ್ತದೆ. ತಾವೇನಾದರೂ ನೋಡಿದ್ದರೆ ತಕ್ಷಣ ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಿದ್ದೀರಿ, ಅವರು ವಕೀಲರು, ಅವರಿಗೆ ಎಲ್ಲಾ ವಿಚಾರ ಗೊತ್ತಿದೆ. ಅವರು ಎ.ಐ.ಟಿ.ಯು.ಸಿ. ಲೀಡರ್, ಕಾರ್ಮಿಕ ಸಂಘದ ನಾಯಕರು ಇಂಥ ಗೊತ್ತು ಅವರನ್ನು ವ್ಯಾನ್‌ನಲ್ಲಿ ಹಾಕಿಕೊಂಡು ಹೋಗಿ ಅರ್ಧ ಗಂಟೆಗಳ ಕಾಲ ಹೊಡೆದಿದ್ದಾರೆ. ಅವರು ಹೊಡೆದಿರುವಂಥ ಹೊಡೆತಕ್ಕೆ ಬೇರೆ ಯಾರಾದರೂ ಆಗಿದ್ದರೆ ಅದೇ ಸ್ಥಳದಲ್ಲಿ ಸಾಯಬೇಕಾಗಿತ್ತು, ಅವರು ತಲೆಗೆ ಹೆಲ್ಮೆಟ್ ಹಾಕಿಕೊಂಡಿದ್ದರಿಂದ ತಲೆಗೆ ಪೆಟ್ಟು ಬಿದ್ದಿಲ್ಲ. ಆ ರೀತಿ ಹೊಡೆಯತಕ್ಕಂಥ ಅಧಿಕಾರವನ್ನು ತಾವು ಪೋಲೀಸರಿಗೆ ಏನಾದರೂ ಕೊಟ್ಟಿದ್ದೀರಾ, ಆ ರೀತಿ ಹೊಡೆಯುವುದು ಸರಿಯೇ,? ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷೆ ಮಾಡಿಸಿದ್ದಾರೆ, ಅಲ್ಲಿ ರಿಪೋರ್ಟ್ ಬರೆದುಕೊಂಡಿದ್ದಾರೆ. ಪೋಲೀಸರು ಈ ದೌರ್ಜನ್ಯ ನಡೆಸುವುದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಎಲ್ಲಾ ಪೋಲೀಸ್ ಅಧಿಕಾರಿಗಳು ಅದೇ ರೀತಿ ಇದ್ದಾರೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಅನೇಕ ಜನ ಪೋಲೀಸ್ ಅಧಿಕಾರಿಗಳು ಒಳ್ಳೆಯವರಿದ್ದು, ಶಾಂತಿಯುತವಾಗಿ ತಮ್ಮ ಕರ್ತವ್ಯ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತಾರೆ, ಆದರೆ ಕೆಲವು ಅಧಿಕಾರಿಗಳು ದೌರ್ಜನ್ಯ ಮಾಡುತ್ತಾರೆ. ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕನ್ನಡಪ್ರಭ ಪತ್ರಿಕೆಯನ್ನು ಕಳುಹಿಸಿಕೊಡುತ್ತೇನೆ, ಅವರ ಪರಿಸ್ಥಿತಿ ಏನಾಗಿದೆ ಎಂದು ಅವರೇ ನೋಡಲಿ, ನಾವು ಹೇಳುವುದು ಇಷ್ಟೆ ಪೋಲೀಸರ ದೌರ್ಜನ್ಯವನ್ನು ತಡೆಗಟ್ಟಬೇಕು, ಪೋಲೀಸರು ಇದೇ ರೀತಿ ಮುಂದುವರೆಯುವುದಾದರೆ, ಇನ್ನು ನಾಗರೀಕರು ಆಗಲಿ, ಕಾರ್ಮಿಕರಾಗಲಿ ಸುಮ್ಮನೆ ಕಾಳಿತುಕೊಳ್ಳುವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರ ಕೈಯಲ್ಲಿ ಲಾಠಿ ಇದೆ. ಅಧಿಕಾರ ಇದೆ, ಕಾನೂನು ಇದೆ ಅಂಥ ಹೇಳಿ ಕಾನೂನನ್ನು ಉಲ್ಲಂಘನೆ ಮಾಡತಕ್ಕದ್ದು ಸರಿಯಾದುದಲ್ಲ, ಕಾನೂನು ಉಲ್ಲಂಘನೆ ಮಾಡಿರತಕ್ಕ ಅಧಿಕಾರಿಗಳನ್ನು ತಾವು ರಕ್ಷಣೆ ಮಾಡತಕ್ಕದ್ದು ಸರಿಯಲ್ಲ ತಾವು ಕೂಡಲೇ ಇದರ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದೇ ವಿಚಾರ ಪ್ರಜಾವಾಣಿಯಲ್ಲಿ ೧೮ನೇ ತಾರೀಖಿನ ದಿವಸ ಬಂದಿದೆ. ಯಾರು ನೋಡಿದರೂ ಎದೆ ನಡುಗಬೇಕಾದಂಥಾದ್ದು ನಡೆದಿದೆ. ವಿದ್ಯಾವಂತರಾದ ವಕೀಲರನ್ನೇ ಈ ರೀತಿ ಹೊಡೆದಿರಬೇಕಾದರೆ ಇನ್ನು ಸಾಮಾನ್ಯ ಜನರ ಗತಿ ಏನು? ಪೋಲೀಸರು ಈ ರೀತಿ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿರತಕ್ಕ ಸರ್ಕಾರಕ್ಕೆ ನಾವು ಏನು ಹೇಳಬೇಕು ಅಂಥ ಗೊತ್ತಿಲ್ಲ. ಇದು ಮುಖ್ಯಮಂತ್ರಿಗಳ ಆಡಳಿತದಲ್ಲಿರತಕ್ಕ ಇಲಾಖೆ. ಈ ಅಧಿಕಾರಿ ಯಾರು ಇದ್ದಾರೋ ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ನಾಲ್ಕು ಜನ ಪೋಲೀಸರು ಬಾಬುಮಾಥ್ಯು ಎನ್ನುವವರನ್ನು ಪೋಲೀಸ್ ವ್ಯಾನ್‌ನಲ್ಲಿ ಹಾಕಿಕೊಂಡು ಹೋಗಿ ಹೊಡೆದಿದ್ದಾರೆ. ಅವರು ಯಾರು ಎಂದು ವಿಚಾರಣೆ ಮಾಡಿ. ಅವರನ್ನು ಸಸ್ಪೆಂಡ್ ಮಾಡಿದರೆ ಬೇರೆಯವರಿಗೆ ನಾನು ಕೂಡ ಇನ್ನು ಮುಂದೆ ತಪ್ಪು ಮಾಡಿದರೆ ನನ್ನ ಮೇಲೂ ಕೂಡ ಈ ರೀತಿ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಹೆದರಿಕೆ ಬರುತ್ತದೆ, ಇನ್ನು ಮುಂದೆ ಅವರು ಈ ರೀತಿ ಯಾರನ್ನೂ ಹೊಡೆಯಲಿಕ್ಕೆ ಹೋಗುವುದಿಲ್ಲ. ಯಾವ ಪೋಲೀಸ್ ಅಧಿಕಾರಿ ಏನಾಕಾರಣ ಈ ಘರ್ಷಣೆಗೆ ಅವಕಾಶ ಮಾಡಿದ್ದಾರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮುಖ್ಯ ಅಂಶ ಏನೆಂದರೆ, ಮೆರವಣಿಗೆ ಹೊರಟಾಗ ಕೆಲವರು ಬಸ್ಸುಗಳ ಮೇಲೆ, ವ್ಯಾನಿನ ಮೇಲೆ, ಪೋಲೀಸರ ಮೇಲೆ ಕಲ್ಲು ತೂರಿದರು ಅಂಥ ತಮ್ಮ ಹೇಳಿಕೆಯಲ್ಲಿದೆ. ಇಲ್ಲಿ ಆಪಾದನೆ ಬಂದಿರತಕ್ಕದ್ದು, ಮೆರವಣಿಗೆಯಲ್ಲಿ ಇದ್ದಂಥ ಕೆಲವರನ್ನು ಅಂದರೆ ಮೂರು ನಾಲ್ಕು ಜನರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ, ಮೂರು ನಾಲ್ಕು

ದಿವಸ ಅಕ್ರಮವಾಗಿ ಇಟ್ಟುಕೊಂಡು ಅವರನ್ನು ಹೊಡೆದಿರತಕ್ಕದ್ದು, ಅದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕಂ. ಕಾನೂನು ಮುರಿದ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಭಾರತ ದಂಡ ಸಂಹಿತೆಯ ಪ್ರಕಾರ ಅವಕಾಶ ಇದೆ. ಆದರೆ ಇಲ್ಲಿ ಬಂದಿರತಕ್ಕ ಪ್ರಶ್ನೆ ಏನೆಂದರೆ, ಪೋಲೀಸರು ಅಕ್ರಮವಾಗಿ ನಡೆದುಕೊಂಡಂಥ ಸನ್ನಿವೇಶ ಇದೆ. ವಕೀಲರಾಗಿರತಕ್ಕಂಥ ಬಾಬುಮಾಥ್ಯು ಎನ್ನುವವರನು ಪೋಲೀಸ್ ಸ್ಟೇಷನ್‌ಗೆ ಪ್ರತ್ಯೇಕವಾಗಿ ಕರೆದುಕೊಂಡು ಹೋಗಿ ಹೊಡೆಯತಕ್ಕದ್ದು ಅಮಾನುಷ ಅಂಥ ಹೇಳಿದರೆ ಅದು ಬಹಳ ಕಡಿಮೆ ಶಬ್ದ. ಪಾಶವೀಶಕ್ತಿಯನ್ನು ಸಾಮಾನ್ಯ ಜನರ ಮೇಲೆ ಉಪಯೋಗಿಸಲಿಕ್ಕೆ ಆ ರೀತಿ ನಡೆದುಕೊಂಡಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆದಕಾರಣ ಇದರ ಬಗ್ಗೆ ಸರ್ಕಾರದವರ ನಿಲುವು ಏನು; ಸರ್ಕಾರದವರು ತನಿಖೆ ನಡೆಸಿ ಅಕ್ರಮವಾಗಿ ನಡೆದುಕೊಂಡ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಇಟ್ಟುಕೊಂಡಿದ್ದಾರೆಯೇ: ಇದರ ಬಗ್ಗೆ ಸರ್ಕಾರದ ಖಚಿತವಾದ ಅಭಿಪ್ರಾಯ ಏನು, ಪೋಲೀಸರು ಅಕ್ರಮವಾಗಿ ನಡೆದರೆ, ಏನೂನು ವಿರುದ್ಧವಾಗಿ ನಡೆದರೆ, ಸಾಮಾನ್ಯ ಜನರಿಗೆ ರಕ್ಷಣೆ ಇದೆಯೇ, ಬೇಲಿಯೇ ಎದ್ದು ಹೊಲ ಮೇಯ್ದುವುದಕ್ಕೆ ಹೊರಟರೆ ಜನಸಾಮಾನ್ಯರ ರಕ್ಷಣೆ ಮಾಡುವವರು ಯಾರು, ಪೋಲೀಸ್ ವ್ಯಾನ್ ಮೇಲೆ ಏನು ಬರೆದುಕೊಂಡಿದ್ದಾರೆಂದರೆ ..ಟು ಗಾರ್ಡ್ ದಿ ಪೀಪಲ್ ' ಅಂತ. ನಿಜವಾಗಿ ಇವರು ಸಾರ್ವಜನಿಕರನ್ನು ರಕ್ಷಣೆ ಮಾಡುತ್ತಾರೆಯೆ? ಇದರ ಬಗ್ಗೆ ಸರ್ಕಾರದವರ ಖಚಿತವಾದ ಅಭಿಪ್ರಾಯ ಏನು ಎಂಬುದನ್ನು ನಿರೀಕ್ಷಣೆ ಮಾಡುತ್ತೇವೆ.

ಶ್ರೀ ಆರ್. ಗುಂಡೂರಾವ್.—ಈಗಾಗಲೇ ಹೇಳಿದ್ದೇನೆ. ಪೋಲೀಸರು ಅನವಶ್ಯಕವಾಗಿ ಲಾಠಿ ಪ್ರಹಾರ ಮಾಡುವುದಿಲ್ಲ. ಲಾಠಿ ಪ್ರಹಾರ, ಟಿಯರ್‌ಗ್ಯಾಸ್, ಏತಕ್ಕೆ ಉಪಯೋಗಿಸುತ್ತಾರೆಂದರೆ ಕೇವಲ ೨೦೦೦ ಜನರಿಗೆ ಮಾತ್ರ ಪೋಲೀಸರು ರಕ್ಷಣೆ ಕೊಡುವುದಿಲ್ಲ. ಎಲ್ಲಾ ಸಾರ್ವಜನಿಕರನ್ನೂ ರಕ್ಷಣೆ ಮಾಡಬೇಕಾಗುತ್ತದೆ. ದಾರಿಯಲ್ಲಿ ಹೋಗತಕ್ಕ ಲಾರಿ, ಬಸ್ಸು ಕಾರು, ಸ್ಕೂಟರ್‌ಗಳಿಗೂ ಮತ್ತು ಅದರಲ್ಲಿ ಹೋಗತಕ್ಕವರಿಗೂ ರಕ್ಷಣೆ ಕೊಡಬೇಕಾಗುತ್ತದೆ. ಮೆರವಣಿಗೆ ಹೋಗಬಾರದೆಂದು ಯಾರೂ ಹೇಳುವುದಿಲ್ಲ. ಆದರೆ ಸಾಮಾನ್ಯವಾಗಿ ಮೆರವಣಿಗೆ ಹೋಗುವಾಗ ಏನಾಗುತ್ತದೆಂದರೆ, ಮಾನ್ಯ ಪಂಪಾಪತಿಯವರು ಹೇಳಿದಂತೆ ಕೆಲವರು ಶಾಂತಿಯುತವಾಗಿ ಹೋಗುತ್ತಾರೆ. ಮತ್ತೆ ಕೆಲವರು ದೊಂಬಿ ಮಾಡುತ್ತಾರೆ. ತಾವು ಅನೇಕ ಉದಾಹರಣೆಗಳನ್ನು ನೋಡಿದ್ದೀರಿ. ಬಸ್‌ನಲ್ಲಿ ಹೋಗುತ್ತಿದ್ದವರಿಗೆ ಕಲ್ಲು ಬಿತ್ತು, ಡ್ರೈವರಿಗೆ ಕಲ್ಲುಬಿತ್ತು, ಯಾರದೋ ಸ್ಕೂಟರನ್ನು ಸುಟ್ಟು ಹಾಕಿದರು, ಯಾರದೋ ಕಾರ್‌ಗೆ ಬಂಕಿ ಹಚ್ಚಿದರು ಎಂಬುದನ್ನು ಪ್ರತಿದಿನ ನೋಡುತ್ತಿರುತ್ತೇವೆ. ಹಾಗಾದರೆ ಇವರಿಗೆಲ್ಲಾ ಯಾರು ರಕ್ಷಣೆ ಕೊಡುತ್ತಾರೆ? ಅಂಥ ಸಂದರ್ಭದಲ್ಲಿ ಶಾಂತಿ, ಶಿಸ್ತು ಪಾಲನೆಗಾಗಿ ಪೋಲೀಸರು ಲಾಠಿ ಪ್ರಹಾರ ಮಾಡಬೇಕಾಗುತ್ತದೆ. ಅದೇ ರೀತಿ ಇಲ್ಲೂ ಮಾಡಿದ್ದಾರೆ. ಮಾನ್ಯ ಪಂಪಾಪತಿಯವರು ಪೋಲೀಸ್ ಸ್ಟೇಷನ್ ಒಳಗೆ ಕರೆದುಕೊಂಡು ಹೋಗಿ ೪ ಜನರಿಗೆ ಹೊಡೆದಿದ್ದಾರೆ ಎಂದು ಏನು ಹೇಳಿದರೂ ಅದನ್ನು ವಿಚಾರಣೆ ಮಾಡಿಸುತ್ತೇನೆ ಮತ್ತು ರಿಪೋರ್ಟ್ ಬಂದನಂತರ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ವ್ಯಾನ್‌ನಲ್ಲಿ ಹಾಕಿಕೊಂಡು ಹೊಡೆದಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ.—ಪೋಲೀಸರು ಹೊಡೆದಿದ್ದಾರೆ ಎನ್ನುವ ಬಗ್ಗೆ ನಾನು ವಾದ ವಿವಾದಕ್ಕೆ ಹೋಗುವುದಿಲ್ಲ. ಆದರೆ ಹೆಣ್ಣು ಮಕ್ಕಳಿಗೆ ಸೀರೆಬಿಚ್ಚಿ ಹೊಡೆದಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಇದರ ಬಗ್ಗೆ ಮಾನ್ಯ ಮಂಖ್ಯಿ ಮಂತ್ರಿಗಳು ಗಮನ ಹರಿಸಬೇಕೆಂದು ಕೇಳಿಕೊಳುತ್ತೇನೆ. ಕಾನೂನು ರಕ್ಷಣೆ ನೆಪದಲ್ಲಿ ಹೆಣ್ಣುಮಕ್ಕಳಿಗೆ ಸೀರೆ ಬಿಚ್ಚಿ ಹೊಡೆಯುವುದಾದರೆ ಈ ಸಭೆ ತನ್ನ ಅಸಹಾಯಕತೆಯನ್ನು ತೋರಿಸಿಕೊಂಡು ಸುಮ್ಮನೆ ಕೂತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಮಾನ್ಯ ಮಂಖ್ಯಿ ಮಂತ್ರಿಗಳ ಖಚಿತವಾದ ಅಭಿಪ್ರಾಯವನ್ನು ಕೇಳಬಯಸುತ್ತೇನೆ.

SRI R. GUNDU RAO.—It is not correct.

SRI H.D. DEVEGOWDA - It has appeared in the Press.

SRI R. GUNDURAO.—Many things have come in the Press

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಪಂಪಾಪತಿಯವರು ಏನು ಅಲಿಗೆಷನ್ ಮಾಡಿದ್ದಾರೆ. ಅದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳಲಿಲ್ಲ.

ಶ್ರೀ ಆರ್. ಗುಂಡೂರಾವ್.—ಅವರು ಪೇಪರಿನಲ್ಲಿ ಬಂದಿದ್ದನ್ನು ಹೇಳಿದ್ದಾರೆ ಅಷ್ಟೆ. ಸೀರೆ ಬಿಚ್ಚಿ ಹೊಡೆದಿದ್ದಾರೆಂದು ಬರೆದ ಮಾತ್ರಕ್ಕೆ ಅದು ನಿಜವಲ್ಲ. ಅದು ಸತ್ಯಕ್ಕೆ ದೂರವಾದುದು.

ಶ್ರೀ ಪಂಪಾಪತಿ.—ಪೋಲೀಸರು ಮಾಡಿರುವುದನ್ನು ನಿಜವಲ್ಲವೆಂದು ತಾವು ಹೇಳುವುದಾದರೆ, ನಾವು ಏನು ಮಾಡಬೇಕು. ನಾವಾದರೂ ಸುಳ್ಳನ್ನು ಏತಕ್ಕೆ ಹೇಳಬೇಕು. ಪೋಲೀಸರ ಮೇಲೆ ನಮಗೆ ಏನಾದರೂ ವಿರೋಧ ಇದೆಯೇ?

ಶ್ರೀ ಆರ್. ಗುಂಡೂರಾವ್.—ಅವರಿಗೆ ನಿಮ್ಮ ಮೇಲೆ ವಿರೋಧವಿಲ್ಲ, ನಿಮಗೆ ಅವರ ಮೇಲೆ ವಿರೋಧವಿಲ್ಲ, ಅಂತೂ ಅಲ್ಲಿ ಘಟನೆ ನಡೆದಿದೆ.

REPRESENTATIONS

SRI C.M. ARUMUGHAM.—Sir, I had sent a Calling Attention notice regarding the non-disbursement of scholarship to the students of Scheduled Caste/Scheduled Tribe studying in the city of Bangalore.

MR. SPEAKER.—We are having it tomorrow.

SRI C.M. ARUMUGHAM.—You are admitting it tomorrow. But it is an important question pertaining to thousands of students studying in Bangalore.

MR. SPEAKER;—It is on the agenda tomorrow.

SRI C.M. ARUMUGHAM: —I will raise it today only.

MR. SPEAKER:—I have already stated that I have put it on the agenda of tomorrow.

SRI SHEERNALY M. CHANDRASHEKAR;—Sir, I had sent a Calling Attention notice regarding Special Group. The Heads of the institutions are mis-interpreting. It is very important, It may be taken up immediately.

ಅಧ್ಯಕ್ಷರು.—ತಾವು ಯಾವಾಗ ಕಳುಹಿಸಿದ್ದೀರಿ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ನಿನ್ನೆ ಕಳುಹಿಸಿದ್ದೇನೆ. ನಿನ್ನೆ ಕಾಲೇಜುಗಳು, ಸ್ಕೂಲುಗಳು ಪ್ರಾರಂಭವಾಗುತ್ತಿವೆ. ಆದ್ದರಿಂದ ಆದಷ್ಟು ಬೇಗ ಅದನ್ನು ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಹೆಚ್. ಗಂಗಾಧರಸ್ವಾಮಿ.—ಜಾವಾ ಫ್ಯಾಕ್ಟರಿ ಲಾಕೌಟ್ ಮಾಡಿ ಸುಮಾರು ೩ ಸಾವಿರ ಜನರನ್ನು ಹೊರಗೆ ಹಾಕಿದ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಅವರಿಗೆ ಬಹಳ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ಯಾವಾಗ ಕಳುಹಿಸಿದ್ದೀರಿ?

ಶ್ರೀ ಹೆಚ್. ಗಂಗಾಧರನ್.—ಮೊನ್ನೆ ದಿವಸ ಕಳುಹಿಸಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಜೂನ್ ೧೨ರಂದು ೨೩ನೇ ಪಟ್ಟಿಯ ನನ್ನ ಚು.ಪ್ರ. ೨೭೭ಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವಾಗ ಕೆಲವು ವಿವರಗಳನ್ನು ಸಭೆಗೆ ಒದಗಿಸುತ್ತೇನೆಂದು ಹೇಳಿದ್ದರು. ಆಪರ ಇಲಾಖೆಯ ಬೇಡಿಕೆಗಳು ಚರ್ಚೆಗೆ ಬರುವುದಕ್ಕಿಂತ ಮುಂಚಿತವಾಗಿ ಯಾವಾಗ ಒದಗಿಸುತ್ತಾರೆಂಬುದನ್ನು ಅವರು ತಿಳಿಸಬೇಕು.

ಅಧ್ಯಕ್ಷರು.—ಮಾನ್ಯ ತಿಮ್ಮಪ್ಪನವರೇ, ತಮ್ಮ ಡಿಮ್ಯಾಂಡ್ ಚರ್ಚೆಗೆ ಬರುವುದಕ್ಕೆ ಮುಂಚಿತವಾಗಿ ಮಾನ್ಯ ಸದಸ್ಯರಿಗೆ ಚರ್ಚೆಗೆ ಅನುಕೂಲವಾಗುವಂಥ ಕೆಲವು ವಿವರಗಳನ್ನು ಕೊಡುತ್ತೇವೆಂದು ಹೇಳಿದ್ದಿರಂತೆ, ಏನಾದರೂ ಇದರ ಬಗ್ಗೆ ಹೇಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅದನ್ನೆಲ್ಲಾ ಅವತ್ತೇ ಹೇಳಿದ್ದೇನೆ. ನಾನು ಹೇಳಿರುವುದು ಅವರಿಗೇ ಜ್ಞಾಪಕವಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ. - ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ, ಮಿಸ್‌ಯೂಸ್ ಆಫ್ ಸ್ಟೀಲ್ ಆಂಡ್ ಸಿಮೆಂಟ್ ಬಗ್ಗೆ ಕೆಲವು ಪ್ರಶ್ನೆಗಳನ್ನು ಕಳುಹಿಸಿದ್ದೆ. ನಾನು ಪ್ರಶ್ನೆಯನ್ನು ಕಳುಹಿಸಿ ಸುಮಾರು ೨೫ ದಿವಸಗಳಾಯಿತು. ಇದಕ್ಕೆಲ್ಲಾ ನಮ್ಮ ವಿಧಾನಸೌಧದಲ್ಲಿಯೇ ಉತ್ತರ ಸಿಕ್ಕುವಂಥವು.....

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

reg.—Observation from the Chair
re:—Publication of news item in a Kannada Daily

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಗೋಕಾಕ್ ವರದಿಯ ಬಗ್ಗೆ ಸರ್ಕಾರದವರು ತಮ್ಮ ನಿಲುವನ್ನು ತಿಳಿಸುತ್ತಾರೆಂದು ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರೂ, ಪತ್ರಿಕಾಕರ್ತರೂ ಬಂದಿದ್ದರು...

ಅಧ್ಯಕ್ಷರು.—I Would like to clarify. ತಾವು ದಯವಿಟ್ಟು ಕೂತುಕೊಳ್ಳಿ. ''ಪತ್ರಕರ್ತರು ಹೊಗಕ್ಕೆ'' ಎಂದು ಒಂದು ದೊಡ್ಡ ಶಿರೋನಾಮೆಯಲ್ಲಿ ಕನ್ನಡ ಪ್ರಭದಲ್ಲಿ ವರದಿಯಾಗಿದೆ. ಅದರಲ್ಲಿ ಒಂದು ಮಾತನ್ನು ಹೇಳಿದೆ. ವಿಧಾನ ಸಭೆಯಲ್ಲಿ ಸ್ಪೀಕರ್‌ರವರ್ದ್ದೇ ಅಂತಿಮ ಅಧಿಕಾರ—ಅವರ ಮಾತಿಗೆ ಎದುರೇ ಇಲ್ಲ, ಎಂದು ವರದಿಯಾಗಿದೆ. ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಪತ್ರಿಕಾ ಕರ್ತರನ್ನು ಅಲ್ಲಿಗೆ ಬಿಡಕೂಡದೆಂದು ನಾನು ಯಾರಿಗೂ ಹೇಳಿಲ್ಲ. ಪತ್ರಕರ್ತರನ್ನು ಬಿಡುವುದಕ್ಕೆ ಒಂದು ಕ್ರಮ ಇದೆ. ನಮ್ಮ ಸೆಕ್ರೆಟರಿಯವರು ಮತ್ತು ಪತ್ರಕರ್ತರ ಪ್ರತಿನಿಧಿಗಳೂ ಸೇರಿ ಮಾತನಾಡಿಕೊಂಡು ಯಾರು ಯಾರಿಗೆ ಪಾಸ್ ಕೊಡಬೇಕೆಂಬ ಬಗ್ಗೆ ಒಂದು ಕ್ರಮವನ್ನು ಅನುಸರಿಸುತ್ತಾರೆ. ಅದರ ಪ್ರಕಾರವೇ ನಾವೂ ಅವರಿಗೆ ಪಾಸ್ ಕೊಟ್ಟಿರುತ್ತೇವೆ. ಯಾರಾದರೂ ಅಧಿಕಾರಿ ಹೇಳಿದ್ದರೆ ಅದನ್ನು ನನ್ನ ಮುಂದೆ ಹೇಳಬಹುದಿತ್ತು. ಆದರೆ ನಾನೇ ಇದನ್ನು ಹೇಳಿದ್ದೇನೋ ಎನ್ನುವ ರೀತಿಯಲ್ಲಿ ಪತ್ರಕರ್ತರನ್ನು ಒಳಗೆ ಬಿಡಲೇ ಕೂಡದು ಎಂದು ನಾನು ಆಜ್ಞೆ ಮಾಡಿದ ರೀತಿಯಲ್ಲಿ ಮತ್ತು ಅದರಲ್ಲಿ ಅವರದ್ದೆ ಅಂತಿಮ ಅಧಿಕಾರ ಅವರ ಮಾತಿಗೆ ಎದುರೇ ಇಲ್ಲ ಎನ್ನುವ ರೀತಿಯಲ್ಲಿ ಬರೆಯತಕ್ಕಂಥದು ಅಷ್ಟು ಸರಿಯಾದುದಲ್ಲ. ಅವರು ಈ ರೀತಿ ಬರೆಯುವುದಕ್ಕೆ ಮುಂಚಿತವಾಗಿ ನನ್ನನ್ನು ಒಂದು ಮಾತು ಕೇಳಿ ಬರೆದಿದ್ದರೆ ಚೆನ್ನಾಗಿರುತ್ತಿತ್ತು. ''ಇಂಡಿಯನ್ ಎಕ್ಸ್‌ಪ್ರೆಸ್''ನಲ್ಲೂ ಕೂಡ ''ರಿಪೋರ್ಟರ್ಸ್ ಎಕ್ಸ್‌ಪೆಲ್ಡ್'' ಅಂತ ಒಂದು ಹೆಡ್ಡಿಂಗ್ ಕೊಟ್ಟು ಬರೆದಿದ್ದಾರೆ. ತಮಗೆಲ್ಲಾ ಗೊತ್ತೇ ಇದೆ. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣವಾಗುವಾಗ, ಬಜೆಟ್ ಮಂಡಿಸುವಾಗ, ಅಥವಾ ಏನಾದರೂ ವಿಶೇಷವಾದಂಥ ವಿಚಾರಗಳೇನಾದರೂ ಇಲ್ಲಿ ಪ್ರಸ್ತಾಪವಾಗುವಾಗ ಗ್ಯಾಲರಿಗೂ ಜನರು ಬರುತ್ತಾರೆ, ಪತ್ರಕರ್ತರ ಸಂಖ್ಯೆಯೂ ಜಾಸ್ತಿ ಇರುತ್ತದೆ. ವಿ ಐ ಪಿ. ಗಳು ಬರುತ್ತಾರೆ. ಇಲ್ಲಿ ಆಸನಗಳ ಕೊರತೆ ಇರುವುದರಿಂದ ಅನೇಕರು ನಿಂತುಕೊಂಡಿದ್ದುದನ್ನು ನಾನು ನೋಡಿದ್ದೇನೆ. ಅಂಥ ದಿವಸದಲ್ಲಿ ನಾವು ಯಾವುದೇ ಅಡ್ಡಿಯನ್ನೂ ಮಾಡುವುದಿಲ್ಲ. ಆದರೆ ಕಾರಣಾಂತರದಿಂದ ನಿನ್ನೆ ಈ ಪ್ರಕರಣ ಜರುಗಿದೆ, ಮಾರ್ಷಲ್ ಈ ರೀತಿ ಹೇಳಿದರು ಅಂತ ವಿವರಣೆ ಕೊಟ್ಟಿದ್ದಾರೆ, ಆದರೆ ನೇರವಾಗಿ ನಾನೇ ಇದನ್ನು ಹೇಳಿದೆ. ಇದು ಅವರಿಗೆ ಗೊತ್ತಾಯಿತು ಎನ್ನುವ ರೀತಿಯಲ್ಲಿ ಬರೆಯುವುದು ಅಷ್ಟು ಸರಿಯಲ್ಲ. ಮತ್ತೆ ಪ್ರಜಾವಾಣಿ ಪತ್ರಿಕೆಯಲ್ಲೂ ಕೂಡ ತಾವು ಗಮನಿಸಬೇಕು. ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಸಂಪಾದಕೀಯ ಕಾಲಂನಲ್ಲಿ ಬರೆಯಲು ಅವರಿಗೆ ಪೂರ್ಣ ಹಕ್ಕು ಇರುತ್ತದೆ. ಬೇರೆ ಕಾಲಂನಲ್ಲಿ ಈ ಸಭೆಯಲ್ಲಿ ಏನು ನಡೆಯುತ್ತದೆ ಅದನ್ನು ಸರಿಯಾಗಿ ಫೇಸಿಂಗ್ ರಿಪೋರ್ಟ್ ಹಾಕತಕ್ಕಂಥದ್ದು ಅವಶ್ಯಕ ಇದನ್ನು ಸದನದ ಸಮಿಾಕ್ಷೆ ಎಂದು ಒಂದು ಬರುತ್ತದೆ ಅದು ಅವರದ್ದೇ ಆದ ರೀತಿಯಲ್ಲಿ ಬರುತ್ತದೆ. ಇಲ್ಲಿ ''ಮೇಲ್ಮನೆಯದೇ'' ಮೇಲುಗೈ ಎಂದರೆ ಏನು ಅರ್ಥ ಮತ್ತೆ ಎಲ್ಲ ವಿಚಾರಗಳಲ್ಲೂ ರಾಜ್ಯ ವಿಧಾನ ಮಂಡಲದ ''ಮೇಲ್ಮನೆಯದೇ ಮೇಲುಗೈ'' ಸರಕಾರ ತರುವ ಶಾಸನ, ಸೂತ್ರ, ನಿರ್ಣಯ, ವಿಷಯ ನಿರೂಪಣೆ, ವರದಿ—ಏನೇ ಆಗಲಿ ಅದರಲ್ಲಿರುವ ಹಂಳುಕನ್ನು ಎತ್ತಿ ತೋರಿಸುವುದರಲ್ಲಿ ಮೇಲ್ಮನೆಯಲ್ಲಿರುವ ''ವಿರೋಧ ಪಕ್ಷಗಳವರದು ಎತ್ತಿದ ಕೈ'' ಹಾಗೆಂದರೆ ಏನು ಅರ್ಥ. ಈ ಸದನದ ಸದಸ್ಯರು ನಿರ್ವಿರ್ಯರಾಗಿ ಕುಳಿತುಕೊಂಡು ೫೦ ರೂಪಾಯಿ